ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ.ಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ 1096/2020

ಪಿಡಬ್ಲ್ಯುಃ - 6
ಸಿಡಬ್ಲುಃ - 12

ದಿನಾಂಕಃ **20.10.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಡಾ. ಶೃತಿ |
| ಗಂಡನ ಹೆಸರು | - ಕೆ. ಎಂ. ಚೇತನ್ |
| ವಯಸ್ಸು | - 35 ವರ್ಷ |
| ವೃತ್ತಿ | - ವೈದ್ಯಾಧಿಕಾರಿ |
| ವಾಸಸ್ಥಳ | - ಮಡಿಕೇರಿ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ದಿಃ 01-07-2016 ರಿಂದ ಇಲ್ಲಿಯ ವರೆಗೆ ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 06.08.202 ರಂದು ಸಮಯ ಬೆಳಿಗ್ಗೆ 8.50 ಗಂಟೆಯಲ್ಲಿ ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ-1 ರವರು ಹಲ್ಲೆಯಾದ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಗಾಯಾಳುವಿನ ಎಡ ಕಾಲಿನ ಮೊಣಕಾಲಿನ ಮೇಲೆ 4 ಇಂಟು 0.5 ಸೆಂ ಮೀ ನ ಹರಿದ ಗಾಯ ಇತ್ತು.

2. ಗಾಯಾಳುವಿನ ಎಡ ಕಾಲಿನ ಮೇಲೆ 8 ಇಂಟು 3 ಸೆಂ ಮೀ ನ ಊತ ಮತ್ತು ಹರಿದ ಗಾಯ ಇತ್ತು.

ಗಾಯಳುವನ್ನು ಎಕ್ಸರೇ ಮಾಡಿ ನೋಡಿದಾಗ ಕಾಲಿನ ಮೂಳೆ ಮುರಿತ ಕಂಡು ಬಂದಿರುತ್ತದೆ. ನನ್ನ ಪ್ರಕಾರ ಗಾಯಾಳುವಿಗೆ ಆದ 1 ನೇ ಗಾಯ ಸಾಮಾನ್ಯ ಸ್ವರೂಪದ ಗಾಯ ಹಾಗೂ 2 ನೇ ಗಾಯ ತೀವ್ರ ಸ್ವರೂಪದ ಗಾಯವಾಗಿರುತ್ತದೆ.

ನಾನು ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ- 5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು

ಗುರುತಿಸಲಾಯಿತು. ಸಾಕ್ಷಿ ಚಾಸಾ-1 ರವರ ಎಕ್ಸರೇಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಅದೇ ಸಮಯದಲ್ಲಿ ಚಾಸಾ-2 ರವರು ಚಿಕಿತ್ಸೆಗಾಗಿ ಹಲ್ಲೆಯಾದ ಹಿನ್ನೆಲೆಯಲ್ಲಿ ಬಂದಿದ್ದು, ಅವರನ್ನು ಬೆಳಿಗ್ಗೆ 9.00 ಗಂಟೆಗೆ ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ.

1. ಗಾಯಾಳುವಿನ ಬಲಗೈನ ತೋರುಬೆರಳಿನ ಚರ್ಮ ಕಿತ್ತು ಬಂದಿರುತ್ತದೆ.
2. ಗಾಯಾಳುವಿನ ಎರಡೂ ಕಾಲುಗಳ ಮೇಲೆ ತರಚಿದ ಗಾಯಗಳು ಇರುತ್ತವೆ.

ಈ ಬಗ್ಗೆ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಸದರಿ ಗಾಯದ ಪ್ರಮಾಣ ಪತ್ರವನ್ನು ನಿಪಿ– 7 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನನ್ನ ಅಭಿಪ್ರಾಯದಲ್ಲಿ ಅವು ಸಾಮಾನ್ಯ ಸ್ವರೂಪದ ಗಾಯವಾಗಿದೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ ಎ ಪಿ ವಕೀಲರಿಂದ ಶ್ರೀ. ಕೆ. ಎಂ. ವಕೀಲರ ಪರವಾಗಿಃ</u>

ಕಾಲಿನ ಭಾಗವನ್ನು ಮೂರು ಭಾಗಗಳಾಗಿ ವಿಭಾಗ ಮಾಡಿ ಜೋಡಿಸಿ ಕಾಲು ಹೇಳಬಹುದು ಎಂದರೆ ಸರಿ. ನಾನು ಮೂಳೆತಜ್ಞಳಲ್ಲ. ನಾನು ಸಾಮಾನ್ಯ ವೈದ್ಯಾಧಿಕಾರಿ ಎಂದರೆ ಸರಿ. ಚಾಸಾ-1 ರವರಿಗೆ ಮಂಡಿಯಿಂದ ಕೆಳ ಭಾಗದಲ್ಲಿ ಎಷ್ಟು ಇಂಚಿನ ಅಂತರದಲ್ಲಿ ಗಾಯ ಇತ್ತು ಎಂದು ನಾನು ನಮೂದು ಮಾಡಿರುವುದಿಲ್ಲ. ಅದೇ ರೀತಿ ಅವರಿಗೆ ಆದಂತಹ ಗಾಯ ಕಾಲಿನ ಮುಂಭಾಗವಾ ಅಥವಾ ಹಿಂಭಾಗವಾ ಎಂದು ಸಹ ನಾನು ನಿಪಿ-5 ರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಗಾಯದ ಸ್ವರೂಪವನ್ನು ಮತ್ತು ಅದರ ದಾರಿಯನ್ನು ನಾನು ನಮೂದಿಸಿಲ್ಲ ಎಂದರೆ ಸರಿ. ಚಾಸಾ-1 ರವರಿಗೆ ಆದ ಗಾಯ ಎಷ್ಟು ಇಂಚು ಆಳಕ್ಕೆ ಆಗಿತ್ತು ಎಂದು ನಾನು ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ ನಾನು ಚಾಸಾ-1 ರವರ ಗಾಯದ ವಯಸ್ಸನ್ನು ಸಹ ನಮೂದಿಸಿಲ್ಲ ಎಂದರೆ ಸರಿ. ಗಾಯದ ರಕ್ತದ ಬಣ್ಣದ ಬದಲಾವಣೆಯ ನಾನು ಬಗ್ಗೆ ಬರೆದಿಲ್ಲ ಎಂದರೆ ಸರಿ. ವೈದ್ಯರಿಗೆ ಸರ್ಜರಿ ಮಾಡಿದ ನಂತರವೇ ಗಾಯದ ಆಳ ತಿಳಿಯುತ್ತದೆ ಎಂದರೆ ಸರಿ. ನನಗೆ ಸರ್ಜರಿಯ ಜ್ಞಾನ ಇಲ್ಲದೆ ಹಾಗು ಅದರ ಬಗ್ಗೆ ತಿಳಿಯದೆ ನಾನು ನಿಪಿ-5 ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರಿಗೆ ಯಾರಿಂದ ಹಲ್ಲೆ ಆಗಿತ್ತು ಎಂದು ನಾನು ನಿಪಿ-5 ಮತ್ತು 7 ರಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಎಷ್ಟು ಸಮಯವನ್ನು ಚಾಸಾ-1 ಮತ್ತು 2 ರವರಿಗೆ ಪರೀಕ್ಷೆ ಮಾಡಲು ತೆಗೆದುಕೊಂಡಿದ್ದೇನೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಎಂಟು ನಿಮಿಷ ಅಂತರದಲ್ಲಿ ಇಬ್ಬರು ರೋಗಿಗಳನ್ನು ಪರೀಕ್ಷೆ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ನಾನು ಮೂಳೆ ತಜ್ಞಳಲ್ಲದಿದ್ದರಿಂದ ನಾನು ಮೂಳೆ ಮುರಿತದ ಬಗ್ಗೆ ನಿಪಿ-5 ನ್ನು ಪೊಲೀಸರ ಕೋರಿಕೆಯ ಮೇರೆಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ರವರ ನಿಪಿ-7 ರ ಗಾಯದ ಪ್ರಮಾಣ ಪತ್ರವನ್ನು ಕಾಲ್ಪನಿಕ ರೀತಿಯಲ್ಲಿ ನೀಡಿದ್ದೇನೆ ಎಂದರೆ ಸರಿಯಲ್ಲ ನಾನು ಚಾಸಾ-1 ಮತ್ತು 2 ರವರನ್ನು ಪರೀಕ್ಷೆ ಮಾಡಿಲ್ಲ ಅವರು ನಮ್ಮ ಆಸ್ಪತ್ರೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಎಕ್ಸರೇ ಮಾಡಿಸಿ ಎಂದು ನಾನೇ ಹೇಳಿದ್ದೇನೆ. ನಿಪಿ-6 ಚಾಸಾ-1 ರವರಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆ ಎಂ ಎಫ್ ಸಿ, ಮಡಿಕೇರಿ.